

ಎಡದಿಂದ ಬಲಕ್ಕೆ:

1. ಸಂಪ್ರದಾಯವನ್ನು ಅನುಸರಿಸಿಯೇ ಹೀಗೆ ನೀಡಿದ್ದು (4)
3. ಆ ಮಚ್ಚಿನ ಅಂಚು ಬಹಳ ಹರಿತ, ಹುಷಾರು (3)
4. ಮುಸುಕು ತೆಗೆದೊಡನೆ ಕಂಡದ್ದು ತಲೆ (3)
6. ಮಾತಿಲ್ಲದಿದ್ದರೇನು? ಓಟು ಹಾಕುವವನೇ ತಾನೇ? (4)
7. ಅಮೂಲ್ಯ ಮಣಿ ಹುಡುಕುವವರು ಕಂಡದ್ದು ಕಡಬು (4)
9. ಚುಡಾಯಿಸುವವರನ್ನು ನಿಗ್ರಹಿಸಲು ತಕ್ಕವರನ್ನು ಆಯ್ಕೆ ಮಾಡು (4)
12. ಪಾತಾಳದಾಳದಿಂ ನಿರ್ಮಿಸಲಾದ ಭದ್ರ ಬುನಾದಿ ಹೇಗಿದೆ? (4)
14. ಕೊಚ್ಚುವ ಆಯುಧದಿಂದ ರಕ್ಷಿಸುವ ತೊಡುಗೆ ಇದು (3)
15. ಬೆಲ್ಲಕ್ಕೆ ಆಸೆಪಟ್ಟ ಎಳೇ ಹುಡುಗ ನೋಡಿ (3)
16. ಹಸುಗೂಸಿನ ಮುಖದಲ್ಲಿ ಸದಾ ಮಂದಹಾಸ (4)

ಮೇಲಿಂದ ಕೆಳಕ್ಕೆ:

1. ಕಂಚು ಮಾರುವವನಂತೆ ಬಂದ ಬೇಹುಗಾರ (4)
2. ಸಂಸ್ಕಾರವನ್ನು ಮನ್ನಿಸಿದ್ದಕ್ಕೆ ಪ್ರಣಾಮ (4)
3. ಮರೆತು ನಿಲ್ಲುವುದು ಸಾಧ್ಯವೇ ಇಲ್ಲ–ಅಂಥ ಅಬ್ಬರ! (3)
5. ಕೊಳಕು ಕಿಂಚಿತ್ತೇ ಇದ್ದರೂ ಭಾರೀ ದೋಷವಾದೀತು (3)
6. ಮೇಜನ್ನು ಮಾರಿದ ಸಂಗತಿಯನ್ನು ಮುಚ್ಚಿಡು (4)
8. ರಾಮಾಯಣದ ದೃಶ್ಯ–ಎಷ್ಟು ಸುಂದರ! (4)
10. ಆಸ್ತಿಯನ್ನು ಕೊಟ್ಟ ದೇವರಿದ್ದಾನೆಂದು ನಂಬದವ ಈತ (3)
11. ಚೆಲುವನ್ನು ಅಧಿಕಗೊಳಿಸುವ ಒಳ್ಳೇ ಕಣ್ಣು (4)
12. ಬೇಲಿ ತೆಗೆವ ತೀರ್ಮಾನಕ್ಕೆ ಒಪ್ಪಿಕೋ (4)
13. ಪ್ರತಿಫಲಕ್ಕೆ ಆಸೆಪಡದೆ ಕಾಪಾಡಿದ ವ್ಯಕ್ತಿ (3)

## 13-3-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸದುಪಾಯ; 3. ಭ್ರಮರ; 4. ವರಾತ; 6. ಸಮಾಧಾನ; 7. ಪರಿಣಯ; 9. ಮರಕತ; 11. ನವನೀತ; 13. ರಹದಾರಿ; 15. ಕಾರಕೂನ; 17. ವರ್ಧನ; 18. ಗಣಿತ; 19. ನಗನಾಣ್ಯ.

ಮೇಲಿಂದ ಕೆಳಕ್ಕೆ:

1. ಸರಸ; 2. ಯವನ; 3. ಭ್ರಮಣ; 5. ತತ್ತರ; 7. ಪತನ; 8. 'ಯನ್ಮತ' (=ತನ್ಮಯ ತಲೆಕೆಳಗು); 9. ಮಧುರ; 10. ತರ್ಕಾರಿ; 12. ನೀರವ; 14. ಹರಿತ; 15 ಕಾನನ; 16. ನಗಣ್ಯ.

# ಪಂಚ ಮಹಾ ದ್ವೀಪಗಳು ಯಾವುವು?

ನಿಮಗೇ ತಿಳಿದಂತೆ ನೀರಿನಿಂದ ಸಂಪೂರ್ಣ ಪರಿವರಿಸಲ್ಪಟ್ಟ ಭೂ ಭಾಗವೇ ದ್ವೀಪ. ಸ್ಪಷ್ಟವಾಗಿಯೇ ದ್ವೀಪಗಳು ಕಡಲಿನಾವಾರದಲ್ಲಷ್ಟೇ ಅಲ್ಲದೆ ವಿಶಾಲ ಸರೋವರಗಳಲ್ಲೂ, ಶಾಶ್ವತ ಜಲ ಪ್ರವಾಹದ ನದೀ ಪಾತ್ರಗಳಲ್ಲೂ ಇರಬಹುದು. ಅದೇನೇ ಇದ್ದರೂ ದ್ವೀಪಗಳ ಸಂಖ್ಯೆ ಸಾಗರವಾರದಲ್ಲೇ ಗರಿಷ್ಠ. ಅತ್ಯಂತ ಇತ್ತೀಚಿನ ಸರ್ವೇಕ್ಷಣೆಯ ಪ್ರಕಾರ ಧರೆಯಲ್ಲಿರುವ ಎಲ್ಲ ದ್ವೀಪಗಳ ಒಟ್ಟು ಸಂಖ್ಯೆ ಸುಮಾರು ಐದು ಲಕ್ಷ! ಈ ಪೈಕಿ ಕೆಲವೇ ಸಾವಿರ ದ್ವೀಪಗಳನ್ನು ಬಿಟ್ಟು ಇನ್ನೆಲ್ಲವೂ ಸಾಗರ ಪ್ರದೇಶದಲ್ಲೇ ಇವೆ. ಸಹಜವಾಗಿಯೇ ಭಾರೀ ವಿಸ್ತಾರದ ಮಹಾನ್ ದ್ವೀಪಗಳೆಲ್ಲ ಇರುವುದೇ ಸಾಗರಗಳಲ್ಲಿ.

ಲಕ್ಷಾಂತರ ಸಂಖ್ಯೆಯಲ್ಲಿರುವ ಇಷ್ಟೂ ದ್ವೀಪಗಳಲ್ಲಿ ವೈಶಾಲ್ಯದಲ್ಲಿ ಪ್ರಥಮ ಐದು ಸ್ಥಾನಗಳಲ್ಲಿರುವ ಒಂಟೊಂಟಿ ದ್ವೀಪಗಳೇ 'ಪಂಚ ಮಹಾ ದ್ವೀಪಗಳು' ಎಂದು ಪ್ರಸಿದ್ಧ. ಆ ದ್ವೀಪಗಳ ನೆಲೆ, ವಿಸ್ತಾರ ಮತ್ತು ವೈಶಿಷ್ಟ್ಯಗಳು:

1. ಗ್ರೀನ್ ಲ್ಯಾಂಡ್: ಧರೆಯ ಅತ್ಯಂತ ವಿಸ್ತಾರ ದ್ವೀಪ (ಭೂಪಟದಲ್ಲಿ ಬಾಣ 1). ಆರ್ಕ್‌ಟಿಕ್ ಪ್ರದೇಶದಲ್ಲಿರುವ ಈ ದ್ವೀಪದ ವಿಸ್ತೀರ್ಣ 2,175,600 ಚ.ಕಿ.ಮೀ.! ಈ ದ್ವೀಪ ದೇಶದ ಏಳರ ಆರಂಶ ಪ್ರದೇಶ ಒಂದೂವರೆ ಕಿ.ಮೀ. ದಪ್ಪದ ಹಿಮ ಹಾಸಿನಿಂದ ಶಾಶ್ವತ ಆವೃತ. ಸೂರ್ಯನ ಉದಯ ಬೆಳಿಗ್ಗೆ ಹತ್ತಕ್ಕೆ; ಅಸ್ತಮಾನ ಮಧ್ಯಾಹ್ನ ಎರಡು ಗಂಟೆಗೆ! ಇದೇ ಅತ್ಯಂತ ಶೀತಲ ದ್ವೀಪ.

2. ನ್ಯೂ ಗಿನಿ: ದ್ವಿತೀಯ ಸ್ಥಾನದ ಈ ಮಹಾ ದ್ವೀಪದ ವಿಸ್ತಾರ 8,08,510 ಚ.ಕಿ.ಮೀ. ಶಾಂತ ಸಾಗರದ ಈ ದ್ವೀಪದ ವೃಷ್ಟಿವನಗಳು ಸ್ವರ್ಗಪಕ್ಷಿ ಮತ್ತು ಕುಂಜ ಪಕ್ಷಗಳಿಗೆ ವಿಖ್ಯಾತ.

3. ಬೋರ್ನಿಯೋ: ಒರಾಂಗೋಟಾನ್‌ಗಳ ಏಕೈಕ ನೆಲೆ. ವಿಸ್ತೀರ್ಣ 7,57,050 ಚ.ಕಿ.ಮೀ.

4. ಮಡಗಾಸ್ಕರ್: ಹಿಂದೂ ಮಹಾಸಾಗರದಲ್ಲಿ ಆಫ್ರಿಕದ ಸನಿಹದ ದ್ವೀಪ 5,94,180 ಚ.ಕಿ.ಮೀ. ವೈಶಾಲ್ಯ. ಲೀಮರ್, ಸಿಫಾಕಾ ಇತ್ಯಾದಿ



ಪ್ರೊಸಿಮಿಯನ್‌ಗಳ ಏಕೈಕ ನೆಲೆ.

5. ಬಾಫಿನ್ ದ್ವೀಪ: ಕೆನಡಿಯನ್ ಆರ್ಕ್‌ಟಿಕ್‌ನಲ್ಲಿರುವ ಈ ದ್ವೀಪದ ವಿಸ್ತಾರ 5,07,451 ಚ.ಕಿ.ಮೀ.

*

ಇಲ್ಲೊಂದು ಮುಖ್ಯ ವಿಷಯ: ನೀರಿನಿಂದ ಸಂಪೂರ್ಣ ಸುತ್ತುವರಿದಿದ್ದರೂ ಇಡೀ ಭೂ ಖಂಡಗಳನ್ನು ದ್ವೀಪಗಳ ಗುಂಪಿಗೆ ಸೇರಿಸುವಂತಿಲ್ಲ. ಆದ್ದರಿಂದಲೇ ಆಸ್ಟ್ರೇಲಿಯಾ ಮತ್ತು ಅಂಟಾರ್ಕ್ಟಿಕಾ ದ್ವೀಪಗಳಲ್ಲ.

■ ಎನ್. ವಾಸುದೇವ್